| ಓ ಎಸ್ | 79/2013 | ಪಿ.ಡಬ್ಲ್ಯೂಃ 1 |
|---|---|---|

ಇಂದು ದಿಃ 26/2/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ವಕೀಲರಿಂದಃ-

ಮುಖ್ಯವಿಚಾರಣೆಯಲ್ಲಿ ಹೇಳಿರುವ ವೀಲುನಾಮೆವಯನ್ನು ಹಾಜರು ಪಡಿಸಿರುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತತೆಋರಿಸ್ತುರುವ ಆರ್ ಟಿ ಸಿ ಗಳು ನೀಲಕಂಠದೇವರ ಹೆಸರಿನಲ್ಲಿ ಇದೆ ಎಂದರೆ ನಿಜ. ದಾಖಲೆಗಳನ್ನು ನಿ ಡಿ 1 ಮತ್ತು 2 ಎಂದು ಗುರುತಿಸಲಾಯಿತು. ನಿ ಪಿ 2 ರಲ್ಲಿ ಶ್ರೀಕಂಠಮೂರ್ತಿ ರವರ ಹೆಸರು ಇದೆ ಎಂದರೆ ನಿಜ. ನಿ ಪಿ 3 ರಲ್ಲಿ ಮಹದೇವಪ್ಪ ರವರ ಹೆಸರು ಇದೆ ಎಂದರೆ ನಿಜ. ನಿ ಪಿ 5 ರಲ್ಲಿ ಮಲ್ಲಣ್ಣ ರವರ ಹೆಸರು ಇದೆ ಎಂದರೆ ನಿಜ. 2019 ರಲ್ಲಿ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿದ್ದು ಎಂದರೆ ಅವರು ಬೇಕಾಗಿಲ್ಲ ಎಂದು ಅಂದುಕೊಂಡೆವು ಆಕಾರಣದಿಂದ ದಾವೆಯಲ್ಲಿ ಮೊದಲಿಗೆ ಸೇರಿಸಿರಲಿಲ್ಲ ಎಂದು ನುಡಿಯುತ್ತೇನೆ. ಶ್ರೀಕಂಠಮೂರ್ತಿ, ಮಹದೇವಪ್ಪ ಹಾಗು ಮಲ್ಲಣ್ಣ ನನ್ನ ಜೊತೆ ಅನ್ಯೋನ್ಯವಾಗಿದ್ದಾರೆ ಎಂದರೆ ನಿಜ. ಅವರಿಗೆ ನಮ್ಮ ಕುಟುಂಬದ ಬಗ್ಗೆ ತಿಳಿದಿದೆ ಎಂದರೆ ನಿಜ. ಶ್ರೀಕಂಠಮೂರ್ತಿ ಹಾಗು ಮಲ್ಲಣ್ಣ ನನ್ನ ತಾಯಿಗಿಂತ 2 ವರ್ಷ ಕಿರಿಯರು ಎಂದರೆ ಮಲ್ಲಣ್ಣ ನನ್ನ ತಾಯಿಗಿಂತ 2 ವರ್ಷ ದೊಡ್ಡವರು ಎಂದು ನುಡಿಯುತ್ತೇನೆ. ಅವರಿಗೆ ನನ್ನ ತಾಯಿ ಯಾರ ಜೊತೆ ಮದುವೆಯಾದರು ಎಂದು ಹಾಗು ಎಲ್ಲಿ ವಾಸವಿದ್ದರು ಎಂದು ಗೊತ್ತು ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನೀಲಕಂಠದೇವರ ಜೊತೆಯೇ ನನ್ನ ತಾಯಿ ಮದುವೆಯಾಗಿದ್ದು ಹಾಗು ಆಬಗ್ಗೆ ಸಾಕ್ಷಿಗಳನ್ನು ಹಾಜರುಪಡಿಸುತ್ತೇನೆ. ನ್ಯಾಯಾಲಯಕ್ಕೆ ಬರಬಾರದೆಂದು ಅವರನ್ನು ಕೈಬಿಟ್ಟು ದಾವೆ ಸಲ್ಲಿಸಿದ್ದು ಎಂದರೆ ಸರಿಯಲ್ಲ. ಮಲ್ಲಣ್ಣ , ಶ್ರೀಕಂಠಮೂರ್ತಿ ಹಾಗು ಮಹದೇವಪ್ಪ ರವರ ಆಸ್ತಿಗೆ ತೊಂದರೆ ಕೊಡಲ್ಲ ಎಂದು ನನ್ನ ಹಾಗು ಅವರ ನಡುವೆ ಒಳಒಪ್ಪಂದವಾಗಿದೆ ಎಂದರೆ ಸರಿಯಲ್ಲ. ಆದ್ದರಿಂದಲೇ ಅವರು ನನ್ನ ಕೋರಿಕೆಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಹಾಗು ತಕರಾರು ಸಲ್ಲಿಸಿಲ್ಲ

ಎಂದರೆ ಸರಿಯಲ್ಲ. ಸ ನಂ.47 ಮತ್ತು 48 ರ ಸುತ್ತಲೂ ತಂತಿಬೇಲಿ ಇದೆ ಹಾಗು ಸದರಿ ಸ ನಂ. ನಲ್ಲಿ ಪಂಪ್ ಸೆಟ್ ಇದೆ ಎಂದರೆ ನಿಜ. ಸಾಕ್ಷಿ ಪುನಃ ನುಡಿಯುತ್ತಾರೆ ಪಂಪ್ ಸೆಟ್ ಇಲ್ಲ ಹಾಗು ತಂತಿಬೇಲಿಯೂ ಇಲ್ಲ. ಅಲ್ಲಿ ಮೆಶಿನ್ ಮನೆ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪಂಪ್ ಸೆಟ್ ಇದೆ ಎಂದು ಪುನಃ ಸೂಚಿಸಿದರೆ ನಿಜ ಎಂದು ಒಪ್ಪಿಕೊಳ್ಳುತ್ತೇನೆ. ಸದರಿ ಸ ನಂ.47 ಮತ್ತು 48 ರಲ್ಲಿ ಶುಂಟಿ ಬೆಳೆಯನ್ನು 2016 ನೇ ಸಾಲಿನಲ್ಲಿ ಬೆಳೆಸಿದ್ದರು ಎಂದರೆ ನಿಜ. ಅದನ್ನು ಕೇರಳದಾತ ಬಂದು ಬೆಳೆಸಿದ್ದು ಎಂದರೆ ನಿಜ. ಮಹದೇವಸ್ವಾಮಿ ರವರು ಕೇರಳಾದ ವ್ಯಕ್ತಿ ಜೊತೆ ಅಗ್ರಿಮೆಂಟ್ ಮಾಡಿಕೊಂಡಿದ್ದು ಎಂದರೆ ಗೊತ್ತಿಲ್ಲ. ಇಬ್ರಾಹಿಂ ಕುಟ್ಟಿರವರೊಂದಿಗೆ ಸದರಿ ಅಗ್ರಿಮೆಂಟ್ ಆಗಿದ್ದು ಎಂದರೆ ಗೊತ್ತಿಲ್ಲ. ರೂ.1,30,000/ ಗಳನ್ನು ಇಬ್ರಾಹಿಂ ಕುಟ್ಟಿರವರಿಂದ 4 ನೇ ಪ್ರತಿವಾದಿ ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ನಾನು ಅಥವಾ ನನ್ನ ತಾಯಿ ಇಬ್ರಾಹಿಂ ಕುಟ್ಟಿರವರಿಗೆ ಆರೀತಿ ಕರಾರು ಮಾಡಿಕೊಟ್ಟಿಲ್ಲ ಎಂದರೆ ನಿಜ. 4 ನೇ ಪ್ರತಿವಾದಿ ವಿರುದ್ಧ ಹಾಗು ಇಬ್ರಾಹಿಂ ಕುಟ್ಟಿ ವಿರುದ್ಧ ನಾನು ಒ ಎಸ್ 50/2016 ರಂತೆ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಕೋರ್ಟಿನಲ್ಲಿ ದಾವೆ ಸಲ್ಲಿಸಿದ್ದೆ ಎಂದರೆ ನಮ್ಮ ಹೆಸರಿನಲ್ಲಿ ಜಮೀನು ಇದ್ದರೂ ಕೂಡ ತೊಂದರೆ ಕೊಡುತ್ತಿದ್ದಾರೆ ಎಂದು ದಾವೆ ಸಲ್ಲಿಸಿದ್ದೇವೆ. ಸದರಿ ದಾವೆಯಲ್ಲಿ ಪ್ರತಿವಾದಿ ಮಹದೇವಸ್ವಾಮಿ ಲಿಖಿತ ತಕರಾರು ಸಲ್ಲಿಸಿದ್ದಾರೆ ಎಂದರೆ ನಿಜ. ಮೊದಲಿಗೆ ಇಬ್ರಾಹಿಂ ಕುಟ್ಟಿರವರ ಹೆಸರನ್ನು ತಪ್ಪಾಗಿ ನಮೂದಿಸಿ ದಾವೆ ದಾಖಲಿಸಿದ್ದೆವು ಹಾಗು ಪ್ರತಿವಾದಿ ಹಾಜರಾದ ನಂತರ ಸರಿಯಾದ ಹೆಸರು ಗೊತ್ತಾದ ಮೇಲೆ ತಿದ್ದುಪಡಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಆನಂತರ ನನ್ನ ತಾಯಿ ಸದರಿ ದಾವೆಯಲ್ಲಿ ಹಾಜರಾಗಲಿಲ್ಲ ಎಂದರೆ ಸರಿಯಲ್ಲ. 17/12/2018 ರಿಂದ 27/4/2019 ರ ವರೆಗೆ ಕಾಲಾವಕಾಶ ಕೊಟ್ಟರೂ ಕೂಡ ನಾವು ಹಾಜರಾಗದೇ ದಾವೆ ವಜಾ ಆಯಿತು ಎಂದರೆ ಸರಿಯಲ್ಲ. ಆ ಕೇಸು ಈಗಲೂ ನೆಡೆಯುತ್ತಿದೆಯೇ ಎಂದರೆ ಗೊತ್ತಿಲ್ಲ. ಅದು ವಜಾ ಆಗಿದೆ ಎಂದರೆ ಗೊತ್ತಿಲ್ಲ. ಅದು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಶುಂಟಿ ಬೆಳೆಯಬೇಕಾದರೆ ನೀರಾವರಿ ಬೇಕು ಎಂದರೆ ನಿಜ. ಇಬ್ರಾಹಿಂ ಕುಟ್ಟಿ

ರವರು 12 ಎಕರೆ ಪೂರ್ತಿ ಶುಂಟಿ ಬೆಳೆ ಹಾಕಿದ್ದರು ಎಂದರೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೆಸರಿನಲ್ಲಿ ಪಂಪ್ ಸೆಟ್ ಮೋಟಾರ್ ನ ಮೀಟರ್ ಇರುವುದು ಎಂದರೆ ಗೊತ್ತಿಲ್ಲ. ಅದು ಆರ್ ಆರ್ ನಂ.24219 ಹಾಗು ಸಂಪರ್ಕ ಸಂಖ್ಯೆ 23/3/2015 ಎಂದರೆ ಗೊತ್ತಿಲ್ಲ. ಆರೀತಿ ವಿದ್ಯುತ್ ಇಲಾಖೆಯಿಂದ ನೀಡಿರುವ ದಾಖಲೆ ಇದೆ ಎಂದರೆ ಗೊತ್ತಿಲ್ಲ. ಸದರಿ ಫೆನ್ಸಿಂಗ್ , ಬೀಗ ಮುಂತಾದಕ್ಕೆ ಇರುವ ರಸೀದಿಗಳು 4 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಪಂಪ್ ಹೌಸ್ ಇದ್ದರೆ ಮಾತ್ರ ಮೀಟರ್ ಕನೆಕ್ಷನ್ ಕೊಡುವುದು ಎಂದರೆ ಗೊತ್ತಿಲ್ಲ. ಅಲ್ಲಿ ಈಗಲೂ ಪಂಪ್ ಹೌಸ್ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಸದರಿ ಸ್ವತ್ತನ್ನು ಆಧಾರ ಮಾಡಿ 13 ಲಕ್ಷ ಸಾಲವನ್ನು ಐ ಸಿ ಐ ಸಿ ಐ ಬ್ಯಾಂಕಿನಿಂದ ಪಡೆದುಕೊಂಡಿದ್ದ ಎಂದರೆ ಗೊತ್ತಿಲ್ಲ. ನಾನು ಅದೇಗ್ರಾಮದವಳು ಆಗಿರುವುದರಿಂದ ಹಾಗು ಅದೇರಸ್ತೆಯಲ್ಲಿ ಓಡಾಡುವುದರಿಂದ ನನಗೆ ಎಲ್ಲಾ ವಿಷಯಗಳು ಗೊತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಆ ರಸ್ತೆಯಲ್ಲಿ ಓಡಾಡುವುದಿಲ್ಲ. ಸದರಿ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ಗೊತ್ತಿಲ್ಲ.

88 ನೇ ಸಾಲಿನಲ್ಲಿ ಸಲ್ಲಿಸಿದ ದಾವೆಯಲ್ಲಿರುವ ಪಕ್ಷಗಾರರನ್ನು ಹಾಗು ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಗೊತ್ತಿಲ್ಲ. ಇವಾಗಲೂ ಕೂಡ ಸದರಿ ಪಕ್ಷಗಾರರನ್ನು ಹಾಗು ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸುವ ಕುರಿತು ನನ್ನ ಆಕ್ಷೇಪಇದೆಯೇ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ಸತ್ಯಾಂಶ ಮರೆಮಾಚಲೆಂದು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಎಂ ಆರ್ 45/1983-84, ಎಂ ಆರ್ 43/95-96, ಎಂ ಆರ್ 9/93-94 ರ ಖಾತೆಯಾಗುವಾಗ ನಂಜುಡಶಿವಯೋಗಿಗಳು, ನೀಲಕಂಠದೇವರು ಹಾಗು ಗೌರಮ್ಮ ಜೀವಂತ ಇದ್ದರು ಎಂದರೆ ಗೊತ್ತಿಲ್ಲ. ಗೌರಮ್ಮ ಯಾವತ್ತು ತೀರಿಕೂಂಡಿದ್ದು ಎಂದು ಗೊತ್ತಿಲ್ಲ. ನಂಜುಂಡಶಿವಯೋಗಿಗಳು ಯಾವತ್ತು ತೀರಿಕೊಂಡಿದ್ದು ಎಂದು ಗೊತ್ತಿಲ್ಲ. ನೀಲಕಂಠದೇವರು 2004 ರಲ್ಲಿ ತೀರಿಕೊಂಡಿದ್ದರು. ಆ ಮೂರು ಮಂದಿ ಒಪ್ಪಿಗೆ ಸಮ್ಮತಿ

ಮೇರೆಗೆ 4 ನೇ ಪ್ರತಿವಾದಿ ಮಹದೇವಸ್ವಾಮಿಗೆ ಖಾತೆಯಾಗಿದ್ದು ಎಂದರೆ ಸರಿಯಲ್ಲ. ಸ ನಂ.117 ರಲ್ಲಿ 2 ಎಕರೆ ಜಮೀನು ರೇಣುಕಮ್ಮ ರವರ ಹೆಸರಿಗೆ ಖಾತೆಯಾಗಿತ್ತು ಎಂದರೆ ಗೊತ್ತಿಲ್ಲ. ಸ ನಂ.158 ರಲ್ಲಿ 3 ಎಕರೆ ಕುರಿತು ಸರ್ವಮಂಗಳ ರವರ ಹೆಸರಿಗೆ ಖಾತೆಯಾಗಿತ್ತು ಎಂದರೆ ಗೊತ್ತಿಲ್ಲ. ಅವರ ಕುಟುಂಬದಲ್ಲಿ ಏನು ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ನಾವೇನಕ್ಕೆ ಅವರ ಮನೆಗೆ ಹೋಗಿ ನೋಡುವುದು , ಕೇಳುವುದು ಎಂದು ನುಡಿಯುತ್ತೇನೆ. ಅವರ ಜಮೀನಿನ ಬಗ್ಗೆ ಏನೆಲ್ಲಾ ವ್ಯವಹಾರವಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಜಮೀನು ಮಾರಾಟ ಮಾಡಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತೇನೆ. ನಮ್ಮ ಕುಟುಂಬಕ್ಕೂ ಗೌರಮ್ಮ ರವರ ಕುಟುಂಬಕ್ಕೂ ಯಾವುದೋ ಸಂಬಂಧಇಲ್ಲವಾದ್ದರಿಂದ ಅವರ ನಡುವೆ ಏನುಆಗಿದೆ ಎಂದು ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅವರು ಬೇರೆಯೇ ಇದ್ದರು ಹಾಗು ನಾವು ಬೇರೆಯೇ ಇದ್ದೇವೆ.

ಮರಣ ಪ್ರಮಾಣಪತ್ರವು ಯಾವ ದಾಖಲೆ ಆಧಾರದಲ್ಲಿ ನೋಂದಣಿಯಾಗುತ್ತೆ ಎಂದರೆ ಆಸ್ಪತ್ರೆಯಲ್ಲಿ ತೀರಿಕೊಂಡ ದಾಖಲೆ ಪ್ರಕಾರ ಎಂದು ನುಡಿಯುತ್ತೇನೆ. ಆಸ್ಪತ್ರೆಯಲ್ಲಿ ದಾಖಲಾಗುವಾಗ ದಾಖಲಾಗುತ್ತಿರುವವರ ಹೇಳಿಕೆ ಮೇರೆಗೆ ವಿವರಗಳನ್ನು ಪಡೆದು ದಾಖಲೆಗೆ ಸಹಿ ಪಡೆದುಕೊಳ್ಳುವುದು ಎಂದರೆ ನಿಜ. ನನ್ನ ತಾಯಿ ಜಯದೇವ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ತೀರಿಕೊಂಡಿದ್ದರು. ಸದರಿ ಆಸ್ಪತ್ರೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಆಸ್ಪತ್ರೆಯಲ್ಲಿ ನಮಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದು ನುಡಿಯುತ್ತೇನೆ. ಆಸ್ಪತ್ರೆಯಲ್ಲಿ ದಾಖಲಾಗಿದ್ದರೆ ಡಿಸ್ ಚಾರ್ಜ್ ಮಾಡುವಾಗ ಡಿಸ್ ಚಾರ್ಜ್ ಸಮ್ಮರಿ ಕೊಡುತ್ತಾರೆ ಎಂದರೆ ನನ್ನ ಅಕ್ಕನ ಮಗ ನನ್ನ ತಾಯಿಯ ಜೊತೆ ಇದ್ದ ಹಾಗು ಆತನನ್ನು ಕೇಳುತ್ತೇನೆ ಎಂದು ನುಡಿಯುತ್ತೇನೆ. ಈ ಕೇಸಿಗೆ ಅನುಕೂಲವಾಗಲಿ ಎಂದು ಕೆಂಪದೇವಮ್ಮನವರ ಗಂಡನ ಹೆಸರು ನೀಲಕಂಠದೇವರು ಎಂದು ಸೃಷ್ಟಿಮಾಡಿ ದಾಖಲೆ ಹಾಜರುಪಡಿಸಿರುವುದು ಎಂದರೆ

ಸರಿಯಲ್ಲ.

ಒ ಎಸ್ 58/2004 ರಂತೆ ನನ್ನ ತಾಯಿ ವಿರುದ್ಧ ದಾವೆ ದಾಖಲಿಸಿದಾಗ ಅದು ನಾಗೇಂದ್ರಮ್ಮ ರವರ ಪರವಾಗಿ ತೀರ್ಪು ಆಯಿತು ಎಂದರೆ ಗೊತ್ತಿಲ್ಲ. ಅದನ್ನು ಪ್ರಶ್ನಿಸಿ ಈ ನ್ಯಾಯಾಲಯದಲ್ಲಿ ನಾನು ಮೇಲ್ಮನವಿಯನ್ನು ಸಲ್ಲಿಸಿದೆ ಎಂದರೆ ನಿಜ. ಅದು ಆರ್ ಎ 14/2014 ಎಂದರೆ ನಿಜ. ಸದರಿ ಅಸಲು ದಾವೆ 4/1/2014 ರಲ್ಲಿ ತೀರ್ಮಾನವಾಯಿತು ಎಂದರೆ ನೆನಪಿಲ್ಲ. ಏಕಪಕ್ಷೀಯ ಆದೇಶ ಮಾಡಬಾರದು ಎಂದು ನಾಗೇಂದ್ರಮ್ಮ ಹಾಗು ಮಹದೇವಸ್ವಾಮಿ ಕೇವಿಯಟ್ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆರೀತಿ ಕೇವಿಯಟ್ ನ ನೋಟೀಸ್ ಅಂಚೆ ಮೂಲಕ ಬಂದಾಗ ನನ್ನ ತಾಯಿ ಹೆಬ್ಬೆಟ್ಟಿನ ಗುರುತುಮಾಡಿ ಅಂಚೆಯನ್ನು ಸ್ವೀಕರಿಸಿದ್ದ್ರು ಎಂದರೆ ಗೊತ್ತಿಲ್ಲ. ಅದರಲ್ಲಿ ನನ್ನ ತಾಯಿಯ ವಿಳಾಸವನ್ನು ನಮೂದಿಸುವಾಗ ಆಕೆಯ ಗಂಡನ ಹೆಸರನ್ನು ಶಂಭುಲಿಂಗಪ್ಪ ಎಂದು ಕಾಣಿಸಲಾಗಿದೆ ಎಂದರೆ ಆರೀತಿ ಕಾಣಿಸಿರುವುದು ನನ್ನ ತಾಯಿಗೆ ಹೇಗೆತಾನೆ ಗೊತ್ತಾಗಬೇಕು ಎಂದು ನುಡಿಯುತ್ತೇನೆ. ಪೋಸ್ಟ್ ಮ್ಯಾನ್ ಗೆ ಊರಿನ ಎಲ್ಲಾ ವ್ಯಕ್ತಿಗಳು ಹಾಗು ಅವರ ವಿವರಗಳು ಗೊತ್ತಿರುವುದಿಲ್ಲ ಎಂದರೆ ಒಂದೇ ಊರಿನಲ್ಲಿ ಇದ್ದಾಗ ಗೊತ್ತಿರುತ್ತೆ ಎಂದು ನುಡಿಯುತ್ತೇನೆ. ಪೋಸ್ಟ್ ಮ್ಯಾನ್ ನಮ್ಮ ಊರಿನವರು. ಅವರ ಹೆಸರುದೇವಣ್ಣ. ಅವರು ಈಗ ನಮ್ಮ ಊರಿನಲ್ಲಿ ಪೋಸ್ಟ್ ಮ್ಯಾನ್ ಆಗಿ ಇಲ್ಲ. ಯಾವ ವರ್ಷದಿಂದ ಯಾವ ವರ್ಷದ ವರೆಗೆ ಅವರು ನಮ್ಮ ಊರಿನಲ್ಲಿ ಪೋಸ್ ಮ್ಯಾನ್ ಆಗಿ ಕೆಲಸ ಮಾಡಿದ್ದರು ಎಂದು ಗೊತ್ತಿಲ್ಲ. 2014 ನೇ ಸಾಲಿನಲ್ಲಿ ಅವರು ನಮ್ಮ ಊರಿನಲ್ಲಿ ಪೋಸ್ಟ್ ಮ್ಯಾನ್ ಆಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ವಿಳಾಸವನ್ನು ಬೇರೆಯವರಿಂದ ಓದಿಸಿ ತಿಳಿದು ಅದು ಆಕೆಗೆನೇ ಬಂದಿದ್ದು ಎಂದು ಖಾತರಿಪಡಿಸಿಕೊಂಡು ನಂತರ ಹೆಬ್ಬೆಟ್ಟು ಗುರುತುಮಾಡಿ ನಂತರ ಅಂಚೆಯನ್ನು ಸ್ವೀಕಾರ ಮಾಡಿರುವುದು ಎಂದರೆ ಸರಿಯಲ್ಲ. ಪೋಸ್ಟ್ ಮ್ಯಾನ್ ಗಳು 3 ನೇ ವ್ಯಕ್ತಿಗಳಿಂದ ವಿಳಾಸವನ್ನು ತಿಳಿದುಕೊಂಡು ಅಂಚೆಯನ್ನು ಜಾರಿಮಾಡುವುದು ಎಂದರೆ ಸರಿಯಲ್ಲ. ನಿಜಾಂಶ ಒಪ್ಪಿಕೊಂಡರೆ ನಮ್ಮ ಕೇಸಿಗೆ ತೊಂದರೆಯಾಗುತ್ತೆ ಎಂದು

ಆರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀಲಕಂಠದೇವರ ಆಸ್ತಿಯನ್ನು ಲಪಟಾಯಿಸಲೆಂದು ನಾವು ಅವರ ಮಕ್ಕಳು ಎಂದು ಸುಳ್ಳು ಪ್ರತಿಪಾದನೆ ಮಾಡಿಕೊಂಡು ಬಂದಿರುವುದು ಎಂದರೆ ಸರಿಯಲ್ಲ. ನಮ್ಮ ಹಾಗು ಅವರ ನಡುವೆ ಯಾವುದೇ ಸಂಬಂಧ ಇಲ ಹಾಗು ನಾವು ಅಪರಿಚಿತರು ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿಯಲ್ಲಿ ಸದರಿ ಭಾಗಾಂಶಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಹಕ್ಕು , ಹಿತಾಸಕ್ತಿ ಅದರಲ್ಲಿ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು:5 ನೇ ಪ್ರತಿವಾದಿಪರ:

ಕಾಲಾವಕಾಶ ನೀಡುವ ಉದ್ದೇಶದಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.